ಗೊತ್ತಾದರೆ ಅವಳಿಗೆ ಪ್ರಮಾದವೆನ್ನುವ ಸಂಗತಿಯೂ ಗೊತ್ತು. ಆದರೂ ಅವನನ್ನು ಆಕೆಗೆ ಗೊತ್ತಿರುವ ಹೆಂಗಸೊಬ್ಬಳ ಮನೆಯಲ್ಲಿ ಇರಿಸಿದ್ದಳು. ಈ ಸಂಗತಿ ಗೊತ್ತಾದ ಗಿರೀಶ ಅವಳನ್ನು ತವರಿಗೆ ಬಿಟ್ಟು ವಾಪಸು ಬರಕೂಡದೆಂದು ಹೇಳಿ ಬಂದಿದ್ದ. ಕೃಷ್ಣವೇಣಿಯ ಅಣ್ಣನೊಬ್ಬ ಭಾವನಿಗೆ ಸಾವಿರ ಕ್ಷಮಾಪಣೆ ಕೇಳಿ ತಂಗಿಯನ್ನು ಗಂಡನ ಮನೆಗೆ ತಂದು ಬಿಟ್ಟಿದ್ದ. ನಂತರ ಎಂದೂ ರಾಜಕಾರಣದ ತಂಟೆಗೆ ಅವಳು ಹೋಗಲಿಲ್ಲ. ಮಗಳನ್ನು ರೂಪಿಸುವುದೇ ಜೀವನ ಧ್ಯೇಯವಾಗಿಸಿಕೊಂಡಳು.

ಬರತಾ ಬರತಾ ಝಾನ್ಸಿೀಗೂ, ಅಪ್ಪನಿಗೂ ದಿನಾಲೂ ಜಗಳ. ಆತ 'ಹುಡುಗಿಯ ಹಾಗೆ ಇರಬೇಕು' ಅಂತಾನೆ.

'ಹುಡುಗಿಯ ಹಾಗಿರುವುದು ಅಂದರೆ ಏನು? ನಿಜಕ್ಕೆ ಹುಡುಗಿ ಹೀಗೇ ಇರಬೇಕು ಅಂತ ಯಾರು ಹೇಳಿದ್ದು? ಹೆಣ್ಣಿನ ಲಕ್ಷಣ ಅಂತ ಯಾವುದೂ ಇಲ್ಲ. ಅಂಥದ್ದೆಲ್ಲಾ ನೀನೇ ನನ್ನ ಮೇಲೆ ಹೇರ್ತಾ ಇದೀಯ. ನಾನು ಅಮ್ಮ, ಅಜ್ಜಿಯ ಥರದವಳಲ್ಲ' ಎಂದು ಝಾನ್ಸಿ ಖಡಾಖಂಡಿತವಾಗಿ ಹೇಳ್ತಾ ಇದ್ದಳು. ಅವಳ ಕತ್ತಿನ ಮೇಲೆ ಮೊಳೆ ಹೊಡೆಯದ ಹಾಗೆ ತಾನು ಕಾವಲಿರುವ ಅಗತ್ಯವಿಲ್ಲವೆಂದೂ, ಮಗಳು ತನ್ನನ್ನು ತಾನು ಕಾಪಾಡಿಕೊಳ್ಳುವ ಶಕ್ತಿ ಇರುವವಳೆಂಬ ಸಂಗತಿ ಅರ್ಥವಾದ ನಂತರ ಕೃಷ್ಣವೇಣಿ ನಿರಾಳವಾದಳು.

ಹೆಂಗಸರು ಹಣ ಸಂಪಾದನೆ ಮಾಡಿದರೂ ಸ್ತ್ರೀ ಲಕ್ಷಣಗಳನ್ನು ಬಿಟ್ಟುಕೊಡಬಾರದೆಂದೂ, ಪತಿಭಕ್ತಿಯನ್ನು ಉಳಿಸಿಕೊಳ್ಳಬೇಕಿರುವುದು ಹೆಣ್ಣಿಗೆ ಮುಖ್ಯವೆಂದು ಈ ನಡುವೆ ಹೆಚ್ಚೆಚ್ಚು ಪ್ರಚಾರ ಮಾಡ್ತಾ ಇದ್ದ ಅಪ್ಪನನ್ನು ಝಾನ್ಸಿ ಗಮನಿಸುತ್ತಲೇ ಇದ್ದಳು. ಆತ ಹೆಂಗಸರ ಆರ್ಥಿಕ ಸ್ವಾತಂತ್ರ್ಯದ ಕುರಿತು ಉಪನ್ಯಾಸ ಕೊಡ್ತಾನೆ. ಮಹಿಳೆಯರು ವಿದ್ಯಾವಂತೆಯರಾಗಬೇಕು ಅಂತಾನೆ, ಆದರೆ ಪುರುಷರ ಮಾತಿಗೆ ಕಟ್ಟುಬೀಳಬೇಕು ಅಂತಾನೆ. ಝಾನ್ಸಿಯ ತಕರಾರು ಇಲ್ಲೇ ಇರುವುದು.

ನನ್ನ ದೇಹ, ನನ್ನ ಮನಸ್ಸು, ನನ್ನ ಯೋಚನೆ, ನನ್ನ ಪ್ರತಿಕ್ರಿಯೆ, ನನ್ನ ಅನುಭವ ನನಗೆ ಸಂಬಂಧಿಸಿದ್ದು – ಇದೆಲ್ಲಾ ನನಗೆ ಸೇರಿದ್ದು ಅಂತಾಳೆ. ಹಾಗೆ ಬೆಳೆದು ದೊಡ್ಡವಳಾದ ಝಾನ್ಸಿ, ಕೃಷ್ಣವೇಣಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಕತ್ತಿಗೆ ಹೊಡೆದಿದ್ದ ಮೊಳೆ ತೆಗೆಸಿ ಹಾಕಿದಳು. ತನ್ನ ಬೆಚ್ಚನೆಯ ಕೈಯ್ಯಿಂದ ಗಾಯಕ್ಕೆ ಲೇಪನ ಪೂಸಿ ಉಪಚರಿಸಿದಳು. ಕೃಷ್ಣವೇಣಿ ತಲೆ ಎತ್ತುವ ಹಾಗಾದಳು.

ಪುಸ್ತಕ, ಗೆಳೆಯರು, ಲೈಬ್ರರಿ, ಚರ್ಚೆ, ಸೆಮಿನಾರು, ಸಭೆ, ಕೂಟ, ಹೋರಾಟವೇ ಬದುಕಾಗಿಸಿಕೊಂಡ ಝಾನ್ಸಿಯ ಮಡಿಲಲ್ಲಿ ಕೃಷ್ಣವೇಣಿ ಹಾಯಾಗಿ, ತೃಪ್ತಿಯಾಗಿ ಕಣ್ಣು ಮುಚ್ಚಿದಳು.

ತಾನು ಮಾಡಿದ ಹೋರಾಟದ ಫಲ ತನ್ನ ಮಗಳು ಗೀತಾಳಿಗೆ ಸಿಗುವುದೆಂದೂ, ಒಬ್ಬ ಗೀತಾ ನೂರಾರು ಗೀತೆಯರಿಗೆ ಮಾದರಿಯಾಗುವಳೆಂದೂ, ಇನ್ನು ಮೇಲೆ ಕುಳ್ಳಿಯರಾಗಲೀ, ಕತ್ತಿಗೆ ಮೊಳೆ ಹೊಡೆಸಿಕೊಳ್ಳುವವರಾಗಲೀ ಇರುವುದಿಲ್ಲವೆಂದು, ಯೋಚಿಸುವವರು, ಹೋರಾಡುವವರು, ಪ್ರಶ್ನೆ ಮಾಡುವವರು ಸಿದ್ಧಗೊಳ್ಳುವರೆಂದು ಆಸೆ ಪಟ್ಟಳು.

ನನ್ನ ತಲೆಮಾರಿನಲ್ಲಿ ಅದೆಷ್ಟು ಹೋರಾಟಗಳು! ಅದೆಷ್ಟು ಬಲಿದಾನಗಳು! ಅದೆಲ್ಲದರ ಅಗತ್ಯ ಈಗ ಇಲ್ಲದಿರಬಹುದು. ಗೀತೆಯರೆಲ್ಲಾ ಟೊಂಕ ಕಟ್ಟಿದ್ದೇ ಆದರೆ ವರದಕ್ಷಿಣೆ ಇರುವುದಿಲ್ಲ, ದೌರ್ಜನ್ಯಗಳಿರುವುದಿಲ್ಲ. ಅತ್ಯಾಚಾರಗಳಿರುವುದಿಲ್ಲ. ಮುಂಬರುವ ಕಾಲ ಅವರದೇ ಅಂದುಕೊಂಡಳು.

ಹೀಗಿರುವಾಗ ಆ ಊರಿಗೆ ಒಬ್ಬ ವ್ಯಕ್ತಿ ಬಂದ. ಶ್ವೇತ ಶಿಲ್ಪದ ಹಾಗೆ ಹೊಳೆಯುತ್ತಿದ್ದ. ಹೊಳೆಯುವ ನೀಲಿ ಕಣ್ಣಿನ ಆತ ಬಂದು ಪಂಚಾಯಿತಿ ಬಂಡೆಯ ಮೇಲೆ ಕೂತ.

ಅಷ್ಟೊತ್ತಿಗಾಗಲೇ ಆ ಊರು ತುಂಬಾನೇ ಬದಲಾಗಿತ್ತು. ಮನೆಗಳಿಗೆ ಕಿಟಕಿ ಬಂದಿದ್ದವು. ಮಾಳಿಗೆಗೆ ಆಂಟೆನಾ ಬಂದಿದ್ದವು. ಪಂಚಾಯಿತಿ ಬಂಡೆಯ ಸುತ್ತಾ ಮಾಳಿಗೆ ಎದ್ದಿದ್ದವು. ನೀರಿಲ್ಲದ ಪೈಪು ಬಂದಿದ್ದವು. ಎತ್ತುಗಳ ಬದಲಿಗೆ ಟ್ರ್ಯಾಕ್ಟರ್ ಬಂದಿದ್ದವು.

ಸುರುವಿಗೆ ಆ ನೀಲಿ ಕಣ್ಣಿನ ಕೆಂಪನೆಯ ವ್ಯಕ್ತಿಯ ಬಗೆಗೆ ಯಾರೂ ತಲೆಕೆಡಿಸಿಕೊಳ್ಳಲಿಲ್ಲ. ಅವರವರ ಜಂಜಾಟ ಅವರಿಗೇ ಇತ್ತು. ಅವನ ಕೊರಳು ಜೋತು ಬೀಳುವಷ್ಟು ಭಾರದ ಚೀಲ ಅವನ ಹೆಗಲಿಗಿತ್ತು. ಚೀಲ ಕೆಳಗಿಳಿಸಿ ಅದರೊಳಗಿಂದ ವಿಚಿತ್ರವಾದ ವಾದ್ಯವೊಂದನ್ನು ತೆಗೆದು ನುಡಿಸಲು ಶುರು ಮಾಡಿದ. ಅದರ ಗಾಯನ ಮಾಳಿಗೆಯ ಮೇಲೆ, ಹೆಂಚಿನ ಮನೆಯ ಮೇಲೆ, ಗುಡಿಸಿಲಿನ ಮೇಲೆ, ಕಾಲುವೆಯ ಏರಿಯ ಮೇಲೆ ಸಾಗಿ ಊರಾಚೆಯ ಹೊಲಗಳ ಮೇಲೆ